

# ನಮ್ಮಲ್ಲಿ ಶಿಸ್ತು ಬರೋದು ಯಾವಾಗ?

■ ಎನ್. ವರಲಕ್ಷ್ಮಿ



ಪ್ರತಿನಿತ್ಯ ಮನೆಯ ಸುತ್ತಲಿನ ಆವರಣವನ್ನು ಸ್ವಚ್ಛಗೊಳಿಸಿ ಅಂಗಳದಲ್ಲಿ ರಂಗೋಲಿಯ ಚಿತ್ತಾರ ಮೂಡಿಸಿ, ಕಣ್ತುಂಬಿಕೊಂಡು ಸಂತಸದಿಂದ ಬಾಗಿಲು ಹಾಕಿ ಒಳಸೇರಿದ ಕೂಡಲೆ ಪ್ರತ್ಯಕ್ಷವಾಗುವವರೆಂದರೆ..... ಬೆಳಗಿನ ವಾಯುವಿಹಾರಕ್ಕೆಂದು ಹೊರಡುವ ಸುಸಂಸ್ಕೃತರು. ಏಕೆಂದರೆ ತಮ್ಮ ಮನೆಯ ಸಾಕುನಾಯಿಗೆ ಒಂದು ಪುಟ್ಟ ರೌಂಡ್ ಹಾಕಿಸಿ ಮನೆಯಲ್ಲಿ ಕಟ್ಟಿಹಾಕಿ... ತಾವು ಮತ್ತೊಂದು ರೌಂಡ್ ಹೋಗೋದು ಏಕೆ ಅಂತೀರ... ಅದು ತನ್ನ ದೈನಂದಿನ ಶೌಚವನ್ನು ಬೇರೊಬ್ಬರ ಮನೆಯ ಸ್ವಚ್ಛಗೊಳಿಸಿದ ಅಂಗಳದಲ್ಲಿ ಮಾಡಲು ಬಿಟ್ಟು ಏನೂ ಅರಿಯದವರಂತೆ ಮುಂದೆ ಕಾಲ್ತೆಗೆಯುವ ಪ್ರಯತ್ನ ಈ ‘ವಿದ್ಯಾವಂತ’ರದ್ದು.

ಕೆಲವು ಸಲ ಅವರನ್ನು ಕರೆದು ನಿಲ್ಲಿಸಿ ಪ್ರಶ್ನಿಸಿದ್ದಿದೆ. ಕೆಲವರು ತಮ್ಮ ತಪ್ಪೊಪ್ಪಿಕೊಂಡು ತಾವೆಂದೂ ಹೀಗೆ ಮಾಡೊಲ್ಲ ಎಂಬ ಭರವಸೆ ನೀಡಿ ಮುನ್ನಡೆದು ಪುನಃ ನಮ್ಮ ಬೀದಿಯಲ್ಲಿ ಕಾಣಿಸಿಕೊಳ್ಳದೇ ಪಕ್ಕದ ಬೀದಿಯಲ್ಲಿ ಓಡಾಡುವಂಥಹವರು ಇದ್ದಾರೆ.

ಇಂದು ನಮಗಾದ ಅನುಭವವೇ ಬೇರೆ. ಬಹುಶಃ 14ರಿಂದ 15ರ ವಯಸ್ಸಿನ ವಿದ್ಯಾರ್ಥಿನಿಯೊಬ್ಬಳು ಕೈಯಲ್ಲಿ ಮೊಬೈಲ್ ಹಿಡಿದು ಬೆಳಗಾಗೆದ್ದು ಸಿನಿಮಾ ಹಾಡೊಂದನ್ನು ಕೇಳುತ್ತಾ ಬಲಗೈಯಲ್ಲಿ ಸರಪಳಿ ತೊಡಿಸಿದ ತನ್ನೆತ್ತರದ ನಾಯಿಯನ್ನು ಸ್ವಚ್ಛಂದವಾಗಿ ಬಿಟ್ಟು ಮುನ್ನಡೆದಾಗ ಆ ನಾಯಿ ನಮ್ಮಂಗಳದ ರಂಗವಲ್ಲಿಯ ಮುಂದೆ ಮತ್ತೊಂದು ಚಿತ್ತಾರ ಮೂಡಿಸಿ ಮುನ್ನಡೆವಾಗಲೇ ನಮ್ಮ ಕೈಗೆ ಸಿಕ್ಕಾಕಿಕೊಂಡಳು. ಶುದ್ಧಗೊಳಿಸಲು ಹೇಳಿದರೆ ಶಾಲೆಗೆ ಹೋಗಲು ಸಮಯವಾಗುತ್ತದೆ. ನಂತರ ಬಂದು ಮಾಡುತ್ತೇನೆ ಎಂದು ನುಣುಚಿಕೊಳ್ಳುವ ಪ್ರಯತ್ನ. ಆ ಹುಡುಗಿಯ ಹಿಂದೆಯೇ ಹೋಗಿ ಪೋಷಕರಿಗೆ ತಿಳಿ ಹೇಳಬೇಕೆಂದು ಅನಿಸಿತು. ಆದರೆ ಅವರಿಂದ ಬರುವ ಉತ್ತರ ಹೇಗಿರಬಹುದೆಂದು ಮೊದಲೇ ಊಹಿಸಿಕೊಂಡೆ.

ಕಳೆದೆರಡು ವರ್ಷಗಳ ಹಿಂದೆ ನಾವು ಕ್ಯಾಲಿಫೋರ್ನಿಯಾಗೆ ಪ್ರವಾಸಕ್ಕೆ ಹೋದಾಗ ಅಲ್ಲಿನ ಎಲ್ಲಾ ಬಡಾವಣೆಗಳಲ್ಲಿ ಉದ್ಯಾನವನಗಳಲ್ಲಿ ಇದ್ದ ಸಲಕರಣೆ ನೋಡಿದಾಗ ಅಚ್ಚರಿಯೊಂದಿಗೆ ಸಂತೋಷವೂ ಆಗಿತ್ತು. ಉದ್ಯಾನವನಗಳಲ್ಲಿ ಸಿಂಗಾರಗೊಂಡ ಶ್ವಾನಗಳು ಓಡಾಡುವಾಗ ಬಹಿರ್ದೆಸೆಗೆ ಹೋದರೆ ಅದರ ಮಾಲೀಕರು ಆ ಸ್ಥಳವನ್ನು ಅಲ್ಲಿಯೇ ಸ್ವಚ್ಛಗೊಳಿಸಿ ಅದಕ್ಕೆಂದೇ ನಿಗದಿಪಡಿಸಿದ ಸ್ಥಳದಲ್ಲಿ ಹಾಕಿ ಮುಂದೆ ತೆರಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ಇಂತಹ ಒಂದು ಸೌಲಭ್ಯ ನಮ್ಮ ದೇಶದಲ್ಲೂ ದೊರೆಯುತ್ತದೆಯೆ? ಜನ ಕಲಿಯುತ್ತಾರೆಯೆ? ಎಂಬ ಒಂದು ಪ್ರಶ್ನೆ ಕಾಡುತ್ತಿದೆ. ನಮ್ಮನ್ನಾಳುವ ಮುಖಂಡರು ಕೆಲವು ಸಲ ಸಾಮಾನ್ಯ ವಿಷಯಗಳಿಗೆ ವಿಶೇಷ ಅಧ್ಯಯನಕ್ಕೆಂದು ವಿದೇಶಕ್ಕೆ ತೆರಳುವ ವಿಷಯ ಪತ್ರಿಕೆಗಳಲ್ಲಿ ರಾರಾಜಿಸುವುದನ್ನು ಕಾಣುತ್ತೇವೆ. ಆದರೆ ಹಿಂತಿರುಗಿದ ನಂತರ ಅಭೂತಪೂರ್ವ ಸ್ವಾಗತದೊಂದಿಗೆ ಅವರು ಮನೆಸೇರಿದ ವಿಷಯ ಕಣ್ಣಿಗೆ ರಾಚುತ್ತದೆಯೇ ಹೊರತು ಬೇರೇನು ಬದಲಾವಣೆಗಳನ್ನು ಕಾಣೋದೆ ಇಲ್ಲ... ಹೀಗೇಕೆ ಎಂಬ ಪ್ರಶ್ನೆ ನಿರಂತರ ಕಾಡುತ್ತಲೇ ಇದೆ. ■